**ದಿನಾಂಕಃ 16/07/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ ಹೆಚ್.ಎ ವಕೀಲರಿಂದಃ**

1. ನನ್ನ ಜನ್ಮ ದಿನಾಂಕಃ12/04/1948. ನನ್ನ ತಾಯಿಯ ಹೆಸರು ತಾಲಿಯಾ ಬೇಗಂ. ನಾನು ಹೊಳೆನರಸೀಪುರದಲ್ಲಿ ಜನಿಸಿದ್ದೇನೆ. ನನ್ನ ಜನನ ಪ್ರಮಾಣ ಪತ್ರ ಇಲ್ಲ. ಆದರೆ ಕ್ಯುಮುಲೇಟಿವ್ ರೆಕಾರ್ಡ್ ಇದೆ. ನನ್ನ ತಾಯಿಯ ತಂದೆಯ ಹೆಸರು ಮೀರ್ ಜಾಫರ್ ಅಲಿ. ನನ್ನ ತಾತ ಹೊಳೆನರಸೀಪುರದವರು. ಅವರಿಗೆ 4 ಜನ ಹೆಣ್ಣು ಮಕ್ಕಳು, ಅಂದರೆ ಮಸ್ತರಿ ಬೇಗಂ, ಮೆಹರುನ್ನಿಸಾ ಬೇಗಂ, ಜೈಬುನ್ನೀಸಾ, ತಾಲಿಯಾ ಬೇಗಂ ಹಾಗೂ 3 ಜನ ಗಂಡು ಮಕ್ಕಳು. ಮಸ್ತರಿ ಬೇಗಂ ರವರ ಗಂಡನ ಹೆಸರು ಮೀರ್ ಅಬ್ಬಾಸ್ ಅಲಿ ಉರುಫ್ ಮೀರ್ ಶೌಖತ್ ಅಲಿ. ಮೀರ್ ಅಬ್ಬಾಸ್ ಅಲಿ ಯವರು ಹೊಳೆನರಸೀಪುರದವರು. ಮೆಹರುನ್ನಿಸಾ ಬೇಗಂ ರವರ ಗಂಡನ ಹೆಸರು ಬಾಬಾ ಸಹೇಬ್. ಬಾಬಾ ಸಾಹೇಬ್ ಹೊಳೆನರಸೀಪುರದವರು. ಜೈಬುನ್ನೀಸಾ ರವರ ಗಂಡನ ಹೆಸರು ಪ್ಯಾರುಸಾಬ್. ಪ್ಯಾರುಸಾಬ್ ರವರು ಹೊಳೆನರಸೀಪುರದವರು. ತಾಲಿಯಾ ಬೇಗಂ ರವರ ಗಂಡನ ಹೆಸರು ಮೀರ್ ಅಬ್ಬಾಸ್ ಅಲಿ ಉರುಫ್ ಮೀರ್ ಶೌಖತ್ ಆಲಿ, ಅವರು ಪಿರಿಯಾಪಟ್ಟಣದವರು.

2. ಮಸ್ತರಿ ಬೇಗಂ ರವರ ಗಂಡನ ಹೆಸರು ಬರೀ ಮೀರ್ ಅಬ್ಬಾಸ್ ಅಲಿ ಆದರೆ ಮೀರ್ ಶೌಖತ್ ಅಲಿ ಎಂದು ಕರೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ತಾಲಿಯಾ ಬೇಗಂ ರವರ ಗಂಡನ ಹೆಸರು ಮೀರ್ ಶೌಖತ್ ಅಲಿ ಎಂದು ಮಾತ್ರ ಆದರೆ ಮೀರ್ ಅಬ್ಬಾಸ್ ಅಲಿ ಎಂದು ಕರೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಸ್ತರಿ ಬೇಗಂ ಮತ್ತು ಮೀರ್ ಅಬ್ಬಾಸ್ ಅಲಿಯವರಿಗೆ 4 ಜನ ಮಕ್ಕಳು. ಅವರ ಹೆಸರು ಮೀರ್ ಮಹಮದ್ ಆಲಿಂ, ಮೀರ್ ಮಹಮದ್ ಅಮೀಲ್, ಮೀರ್ ಮಹಮದ್ ಫಾಜಿಲ್ ಮತ್ತು ಹೂರ್ ಬಾನು. ಮಸ್ತರಿ ಬೇಗಂ ಮತ್ತು ಮೀರ್ ಅಬ್ಬಾಸ್ ಅಲಿಯವರಿಗೆ ನಾನು ಮಗ ಎಂದರೆ ಸರಿಯಲ್ಲ. ನಾನು ಅವರ ಮಗನಾಗಿದ್ದರೂ ಸಹ ಪ್ರತಿವಾದಿಗಗಳಿಗೆ ಅನಾನುಕೂಲ ಮಾಡಲು ಅವರ ಮಗನಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮೀರ್ ಅಬ್ಬಾಸ್ ಅಲಿಯವರನ್ನು ಮೀರ್ ಶೌಖತ್ ಅಲಿ ಎಂದು ಸಹ ಕರೆಯುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಮೀರ್ ಅಬ್ಬಾಸ್ ಅಲಿಯವರನ್ನು ಮೀರ್ ಶೌಖತ್ ಅಲಿ ಎಂದು ಕರೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೀರ್ ಅಬ್ಬಾಸ್ ಅಲಿ ಯವರ ತಂದೆಯ ಹೆಸರು ಗೊತ್ತಿಲ್ಲ. ಅವರು ಅಂದಾಜು 1992 ರಲ್ಲಿ ಮರಣಗೊಂಡಿರಬಹುದು. ಸಾಕ್ಷಿಗೆ ಮರಣ ಪ್ರಮಾಣ ಪತ್ರವನ್ನು ತೋರಿಸಿ, ಮೀರ್ ಅಬ್ಬಾಸ್ ಅಲಿ ಯವರ ಮರಣ ಪ್ರಮಾಣ ಪತ್ರ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದನ್ನು **ನಿಡಿ.1** ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಮೀರ್ ಅಬ್ಬಾಸ್ ಅಲಿ ಉರುಫ್ ಮೀರ್ ಶೌಖತ್ ಅಲಿ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಆ ದಾಖಲೆಯಲ್ಲಿ ಆ ರೀತಿ ಬರೆದಿಲ್ಲ, ಆದರೆ ಅವರನ್ನು ಮೀರ್ ಶೌಖತ್ ಅಲಿ ಎಂದು ಕರೆಯುತ್ತಿದ್ದರು ಎಂದು ನುಡಿಯುತ್ತಾರೆ.

4. ತಾಲಿಯಾ ಬೇಗಂ ಮತ್ತು ಮೀರ್ ಶೌಖತ್ ಅಲಿಯವರಿಗೆ 4 ಜನ ಗಂಡು ಮಕ್ಕಳು, 4 ಜನ ಹೆಣ್ಣು ಮಕ್ಕಳು. ಮೊದಲನೆಯವರು ನಾನು ಮೀರ್ ಮಸರತ್ ಅಲಿ, ನಿಗಾರ್ ಬಾನು, ಗುಲ್ನಾಸ್ ಬಾನು, ಮೀರ್ ನುಸ್ರತ್ ಅಲಿ, ಉಮ್ಮೆಸ್ಮಲ್ಮಾ ಬಾನು, ತಾನಿಯತ್ ಅಲಿ, ಮೀರ್ ಫಿರಾಸತ್ ಅಲಿ, ಜೀನತ್ ಬಾನು. ನಾನು ತಾಲಿಯಾ ಬೇಗಂ ಮತ್ತು ಮೀರ್ ಶೌಖತ್ ಅಲಿಯವರ ಮಗನಲ್ಲ ಎಂದರೆ ಸರಿಯಲ್ಲ. ನಾನು ಮಸ್ತರಿ ಬೇಗಂ ಮತ್ತು ಮೀರ್ ಅಬ್ಬಾಸ್ ಅಲಿಯವರ ಮಗ ಎಂದರೆ ಸರಿಯಲ್ಲ. ತಾಲಿಯಾ ಬೇಗಂ ರವರ ಗಂಡನನ್ನು ಮೀರ್ ಶೌಖತ್ ಅಲಿ ಎಂದು ಮಾತ್ರ ಅವರ ಹೆಸರು ಎಂದರೆ ಸರಿಯಲ್ಲ. ಮೀರ್ ಶೌಖತ್ ಅಲಿ ರವರಿಗೆ ಮೀರ್ ಅಬ್ಬಾಸ್ ಅಲಿ ಎಂದು ಕರೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೀರ್ ಶೌಖತ್ ಅಲಿ ರವರನ್ನು ಮೀರ್ ಅಬ್ಬಾಸ್ ಅಲಿ ಎಂದು ಕರೆಯುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

5. ಮುಸ್ತರಿ ಬೇಗಂ ರವರ ಗಂಡ ಮೀರ್ ಅಬ್ಬಾಸ್ ಅಲಿ ರವರು ಪಶು ಸಂಗೋಪನಾ ಇಲಾಖೆಯಲ್ಲಿ ಹೆಡ್ ಕ್ಲರ್ಕ್ ಆಗಿದ್ದರು. ಅವರು ಎಲ್ಲೆಲ್ಲಿ ಕೆಲಸ ಮಾಡಿದ್ದರು ಎಂದು ಗೊತ್ತಿಲ್ಲ. ಅವರು ಅರಸೀಕೆರೆಯಲ್ಲೂ ಕೆಲಸದಲ್ಲಿದ್ದರು ಎಂದರೆ ಸರಿ. ಅವರು

ನಿವೃತ್ತಿಯಾದ ನಂತರ ಹೊಳೆನರಸೀಪುರದಲ್ಲಿ ಬಂದು ವಾಸವಿದ್ದರು ಎಂದರೆ ಸರಿ. ಮೀರ್ ಅಬ್ಬಾಸ್ ಅಲಿ ಯವರ ಹೆಂಡತಿ ಮುಸ್ತರಿ ಬೇಗಂ ನಿಧನಗೊಂಡಿದ್ದಾರೆ. ಮೀರ್ ಅಬ್ಬಾಸ್ ಅಲಿ ಯವರಿಗೆ ಎಷ್ಟು ಜನ ಸಹೋದರರು ಎಂದು ಗೊತ್ತಿಲ್ಲ.

6. ತಾಲಿಯಾ ಬೇಗಂ ಮತ್ತು ಅವರ ಗಂಡ ಶೌಖತ್ ಅಲಿಯವರಿಗೆ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಅವರ ಹೆಸರು ಸೈಯತ್ ಮಾ, ಮೀರ್ ಶೌಖತ್ ಅಲಿ, ಮೀರ್ ಆಸಿಫ್ ಅಲಿ, ನಸೀರಾ ಬೇಗಂ, ಮೀರ್ ನಬೀದ್ ಅಲಿ. ಮೀರ್ ಶೌಖತ್ ಅಲಿ ವ್ಯವಸಾಯ ಮಾಡುತ್ತಾರೆ. ಅವರು ಮೊದಲಿನಿಂದಲೂ ಪಿರಿಯಾಪಟ್ಟಣದಲ್ಲೇ ವಾಸಿಸುತ್ತಿದ್ದಾರೆ. ಅವರ ತಂದೆಯೂ ಪಿರಿಯಾಪಟ್ಟಣದವರೇ.

7. ನಾನು ಎಸ್.ಎಸ್.ಎಲ್.ಸಿ ಪಾಸಾಗಿದ್ದೇನೆ. ನನ್ನ ಪ್ರಾಥಮಿಕ ವಿಧ್ಯಾಬ್ಯಾಸ ಅರಸೀಕೆರೆಯಲ್ಲಿ ಮಾಡಿದ್ದೇನೆ. ಸಾಕ್ಷಿಗೆ ಶಾಲಾ ದಾಖಲಾತಿಯನ್ನು ತೋರಿಸಿ ಇದು ನಿಮ್ಮದಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು **ನಿಡಿ.2** ಎಂದು ಗುರುತಿಸಲಾಯಿತು. ನಿಡಿ.2 ರಲ್ಲಿ ತಂದೆಯ ಹೆಸರನ್ನು ಮೀರ್ ಅಬ್ಬಾಸ್ ಅಲಿ ಎಂದು ನಮೂದಿಸಿದೆ. ನಾನು ಎಸ್.ಎಸ್.ಎಲ್.ಸಿ ಯನ್ನು ಅರಸೀಕೆರೆಯಲ್ಲಿ ಓದಿದ್ದೇನೆ. ಫೇಲಾದ ನಂತರ ಪಿರಿಯಾಪಟ್ಟಣಕ್ಕೆ ಬಂದೆ. ನನಗೆ 2 ವರ್ಷ ಇದ್ದಾಗ ಮೀರ್ ಶೌಖತ್ ಅಲಿ–ನನ್ನ ತಂದೆ ನನ್ನ ದೊಡ್ಡಪ್ಪನ ಬಳಿ ಅರಸೀಕೆರೆಯಲ್ಲಿ ಬಿಟ್ಟಿದ್ದರು, ಅವರೇ ನನ್ನನ್ನು ಸಾಕಿದ್ದು, ಓದಿಸಿದ್ದು. ನಾನು ಮುಸ್ತರಿಬೇಗಂ ಮತ್ತು ಮೀರ್ ಅಬ್ಬಾಸ್ ಅಲಿಯವರ ಮಗ ಎಂದರೆ ಸರಿಯಲ್ಲ. ನನ್ನನ್ನು ನನ್ನ ದೊಡ್ಡಪ್ಪನ ಮನೆಗೆ ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ದೊಡ್ಡಪ್ಪ ಎಂದು ಹೇಳುವವರೇ ನನ್ನ ತಂದೆ ಎಂದರೆ ಸರಿಯಲ್ಲ.

8. ನಾನು ಎಸ್.ಎಸ್.ಎಲ್.ಸಿ ಫೇಲಾದ್ದರಿಂದ ನನ್ನ ತಂದೆ ನನ್ನ ತಾಯಿ ಅವರ ಅಕ್ಕನ ಮನೆ ಪಿರಿಯಾಪಟ್ಟಣಕ್ಕೆ ಕಳುಹಿಸಿದರು ಎಂದರೆ ಸರಿಯಲ್ಲ. ಆಗ ಅವರು ಎಸ್.ಎಸ್.ಎಲ್.ಸಿ ಓದಿಸಿದರು ಎಂದರೆ ಸರಿಯಲ್ಲ. ನನ್ನ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಇದೆ. ಅದನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನಾನು ಅರಣ್ಯ ಇಲಾಖೆಯ ಗಾರ್ಡ್ ಆಗಿ ಸೇರಿ, ಅರಣ್ಯಾಧಿಕಾರಿಯಾಗಿ ನಿವೃತ್ತಿಯಾಗಿದ್ದೇನೆ. ನನ್ನನ್ನು ಕೆಲಸಕ್ಕೆ ಸೇರಿಸಿದವರು ಮೀರ್

ಶೌಖತ್ ಅಲಿ. ನಾನು ಮೊದಲು ಬೈಲಕುಪ್ಪೆಯಲ್ಲಿ ಕೆಲಸ ಮಾಡಿದ್ದೆ. ನಿವೃತ್ತಿಗೊಂಡಿದ್ದು ವಿಜಿಲೆನ್ಸ್ ಫಾರೆಸ್ಟ್ ಸ್ಕ್ವಾಡ್ ಆಗಿ ಮಡಿಕೇರಿಯಲ್ಲಿ. ನನ್ನ ತಂದೆ ತಾಯಿಯ ಹೆಸರು ನನ್ನ ಸರ್ವೀಸ್ ರೆಕಾರ್ಡ್‌ನಲ್ಲಿ ಬರೆದಿದೆ ಎಂದರೆ ಸರಿ. ನನ್ನ ಸರ್ವೀಸ್ ರೆಕಾರ್ಡ್ ನಲಲ್ಲಿ ನನ್ನ ತಾಯಿಯ ಹೆಸರು ಮುಸ್ತರಿ ಬೇಗಂ ಮತ್ತು ತಂದೆಯ ಹೆಸರು ಮೀರ್ ಅಬ್ಬಾಸ್ ಅಲಿ ಎಂದು ಬರೆದಿದೆ ಎಂದರೆ ಸರಿ. ಮುಸ್ತರಿ ಬೇಗಂ ಮತ್ತು ಮೀರ್ ಅಬ್ಬಾಸ್ ಅಲಿಯವರೇ ನನ್ನ ನಿಜವಾದ ತಾಯಿ ತಂದೆ ಆದ್ದರಿಂದ ಅದೇ ರೀತಿ ನನ್ನ ಸೇವಾ ಪುಸ್ತಕದಲ್ಲಿ ಬರೆಸಿದ್ದೇನೆ ಎಂದರೆ ಸರಿ.

9. ನಿಡಿ.2 ರಲ್ಲಿ ನನ್ನ ಜನ್ಮ ದಿನಾಂಕಃ12/04/1948 ಎಂದು ಬರೆದಿದೆ. ಸಾಕ್ಷಿಗೆ ಆಧಾರ್ ಕಾರ್ಡ್ ತೋರಿಸಿ ಇದು ನಿಮ್ಮದಾ ಎಂದರೆ ಹೌದು ಎಂದು ನುಡಿಯುತ್ತಾರೆ. ಅದನ್ನು **ನಿಡಿ.3** ಎಂದು ಗುರುತಿಸಲಾಯಿತು. ನಿಡಿ.3 ರಲ್ಲೂ ನನ್ನ ತಂದೆಯ ಹೆಸರು ಮೀರ್ ಅಬ್ಬಾಸ್ ಅಲಿ ಎಂದು ಬರೆದಿದೆ ಎಂದರೆ ಸರಿ. ನಿಡಿ.3 ರಲ್ಲಿ ನನ್ನ ಜನ್ಮ ದಿನಾಂಕವನ್ನು 1951 ಎಂದು ಬರೆದಿದೆ, ಆದರೆ ಈಗ ನನ್ನ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡಿಸಿದ್ದೇನೆ. ಸಾಕ್ಷಿಗೆ ಮತದಾರರ ಗುರುತಿನ ಚೀಟಿಯ ಪ್ರತಿಯನ್ನು ತೋರಿಸಿ, ಅದು ನಿಮ್ಮದಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು **ನಿಡಿ.4** ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಜನ್ನ ದಿನಾಂಕವನ್ನು ದಿಃ12/04/1948 ಎಂದು ಬರೆದಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅದನ್ನು ನಾನು ತಿದ್ದುಪಡಿ ಮಾಡಿಸಿದ್ದೇನೆಂದು ನುಡಿಯುತ್ತಾರೆ. ನಿಡಿ.4 ರಲ್ಲಿ ಜನ್ಮ ದಿಃ12/04/1949 ಎಂದು ಇದೆ ಎಂದರೆ ಸಾಕ್ಷಿಯು ಅದನ್ನು ತಿದ್ದುಪಡಿ ಮಾಡಿಸಿದ್ದೇನೆಂದು ನುಡಿಯುತ್ತಾರೆ. ನಿಡಿ.3 ಮತ್ತು 4 ರಲ್ಲಿ ನಾನೇ ತಪ್ಪು ಜನ್ಮ ದಿನಾಂಕವನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ.

10. ನನಗೆ ಪಿಂಚಣಿ ಎಸ್.ಬಿ.ಐ ಬ್ಯಾಂಕ್‌ಗೆ ಬರುತ್ತದೆ. ಅದರ ಖಾತೆ ಸಂಖ್ಯೆ ಈಗ ಗೊತ್ತಿಲ್ಲ. ಅದರಲ್ಲೂ ಸಹ ನನ್ನ ತಂದೆಯ ಹೆಸರು ಮೀರ್ ಅಬ್ಬಾಸ್ ಅಲಿ ಎಂದು ಇದೆ ಎಂದರೆ ಸರಿ. ನನ್ನ ಶಾಲಾ ದಾಖಲಾತಿ, ಸೇವಾ ಪುಸ್ತಕ ಮತ್ತು ಬ್ಯಾಂಕ್ ಪುಸ್ತಕಗಳಲ್ಲೂ ನನ್ನ ತಂದೆಯ ಹೆಸರು ಮೀರ್ ಅಬ್ಬಾಸ್ ಅಲಿ ಎಂದು ಮಾತ್ರ ಇದೆ ಎಂದರೆ ಸರಿ. ಯಾವುದೇ

ದಾಖಲೆಗಳಲ್ಲೂ ಮೀರ್ ಶೌಖತ್ ಅಲಿ ಎಂದು ಇಲ್ಲ ಎಂದರೆ ಸರಿ. ಆದರೆ ದಾಖಲೆಗಳನ್ನು ನೀಡುತ್ತೇನೆ. ಯಾವುದೇ ದಾಖಲೆಗಳು ಇಲ್ಲದ ಕಾರಣ ನನ್ನ ತಂದೆಯ ಹೆಸರನ್ನು ಮೀರ್ ಶೌಖತ್ ಅಲಿ ಎಂಬ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀಸವಾಲನ್ನು 1 ನೇ ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**